**<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>**

**<u>ದಿನಾಂಕಃ-14.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ವಾಟೀ ಸವಾಲುಃ ಡಿಹೆಚ್. ಆರ್. ಪರ</u>**

**<u>ಶ್ರೀ . ಕೆ.ಎಂ.ಎಸ್.ವಕೀಲರಿಂದಃ</u>**

ಸ.ನಂಃ 125/1 ಮೂಲತಃ ಡಿ.ಹೆಚ್.ಆರ್. ರವರಿಗೆ ಸೇರಿರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನ ಡಿಹೆಚ್.ಆರ್. ರವರ ಸ್ವಾಧೀನಾನುಭವಕ್ಕೆ ನಾನು , ಪಾರ್ವತಮ್ಮ , ಮಂಜು ಮತ್ತು ಕುಮಾರ್ ರವರು ತೊಂದರೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಃ159/2008 ರ ದಾವೆಯು ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು ವಕೀಲರನ್ನು ಇಟ್ಟುಕೊಂಡು ದಾವೆಯನ್ನು ನಡೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯು ಡಿಕ್ರಿಯಾದ ನಂತರ ಆರ್.ಎ.ನಂಃ42/2016 ರಂತೆ ನಾನು ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯು ದಿಃ 14-02-2019 ರಲ್ಲಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಹೀಗಿದ್ದರೂ ಸಹ ನಾನು ಡಿ.ಹೆಚ್.ಆರ್. ರವರಿಗೆ ಈಗಲೂ ಸಹ ತೊಂದರೆ ನೀಡುತ್ತಿರುತ್ತೇನೆ ಎಂದರೆ ಸರಿಯಲ್ಲ. ಡಿ.ಹೆಚ್.ಆರ್. ರವರ ಸ್ವತ್ತಿನಲ್ಲಿ ನಾನು 2023 ರಲ್ಲಿ ಗುಡಿಸಲನ್ನು ಹಾಕಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಗುಡಿಸಲು ಹಾಕಲು ಪ್ರಯತ್ನಿಸಿದಾಗ ಅದನ್ನು ಡಿ.ಹೆಚ್.ಆರ್. ರವರು ಪ್ರಯತ್ನಿಸಿದಾಗ ನಾನು ಸದರಿಯವರಿಗೆ ಹೆದರಿಸಿ ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಡಿ.ಹೆಚ್.ಆರ್. ರವರಿಗೆ ಸ್ವತ್ತಿಗೆ ಸಂಬಂದಿಸಿದಂತೆ ಡಿ.ಹೆಚ್.ಆರ್. ರವರು ಆ ಸ್ವತ್ತಿನೊಳಗೆ ಬಂದರೆ ನಿಮ್ಮನ್ನು ಮುಗಿಸಿಬಿಡುತ್ತೇವೆ ಎಂದು ಪ್ರಾಣಬೆದರಿಕೆ ಹಾಕಿರುತ್ತೇವೆ ಎಂದರೆ ಸರಿಯಲ್ಲ.

ಡಿ.ಹೆಚ್.ಆರ್. ರವರು ನನ್ನ ಹಾಗೂ ಪಾರ್ವತಮ್ಮ ಹಾಗೂ ಮಂಜುರವರ ವಿರುದ್ದ ಗುಬ್ಬಿ ಪೋಲೀಸ್ ಠಾಣೆಗೆ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಪೋಲೀಸರು ಆಗ ನಮ್ಮನ್ನು ಕರೆಸಿ ನ್ಯಾಯಾಲಯದ ಆದೇಶವಾಗಿ ಅದನ್ನು ಉಲ್ಲಂಘಿಸಿ ತೊಂದರೆ ನೀಡಬಾರದು ಎಂದು ನಮಗೆ ಬುದ್ದಿವಾದ ಹೇಳಿ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ನಮ್ಮ ವಿರುದ್ದ ಆದೇಶವಾಗಿದ್ದರೂ ಸಹ ಇಂದಿಗೂ ಡಿ.ಹೆಚ್.ಆರ್. ರವರ ಸ್ವತ್ತಿಗೆ ಸಂಬಂದಿಸಿದಂತೆ ನಾವು ತೊಂದರೆ ನೀಡುತ್ತಿರುತ್ತೇವೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ನಮ್ಮ ವಿರುದ್ದ ಆದೇಶವಾಗಿದ್ದರೂ ಸಹ ನಮಗೆ ಗೊತ್ತಿಲ್ಲವೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ನಾನು ಸಲ್ಲಿಸಿರುವ ನನ್ನ ಪ್ರಮಾಣಪತ್ರದಲ್ಲಿರುವ ವಿಚಾರಗಳು ನನಗೆ ಈಗ ಮರೆತು ಹೋಗಿರುತ್ತವೆ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**